ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD,**
**6th CROSS, MALLESHWARAM, BANGALORE – 560 003**

ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ 2022

# STATE LEVEL SSLC PREPARATORY EXAMINATION, FEBRUARY 2022

ಸಂಕೇತ ಸಂಖ್ಯೆ : **85-K** Code No. : **85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

(ಕನ್ನಡ ಮಾಧ್ಯಮ / **Kannada Medium**)

ದಿನಾಂಕ : 22. 02. 2022 ] [ Date : 22. 02. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತದೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



Downloaded from scoringtarget.com

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಭಾರತದಲ್ಲಿದ್ದ ಫ್ರೆಂಚರ ಪ್ರಮುಖ ವ್ಯಾಪಾರ ಕೇಂದ್ರ

   (A) ಸೂರತ್ (B) ಕೊಚ್ಚಿನ್

   (C) ಪಾಂಡಿಚೇರಿ (D) ಮುಂಬೈ

2. ವಿಶಾಲ 'ಮೈಸೂರು ರಾಜ್ಯ'ವು ಅಸ್ತಿತ್ವಕ್ಕೆ ಬಂದದ್ದು

   (A) 1949 (B) 1950

   (C) 1952 (D) 1956

3. ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿರುವ ವಿಧಿಗಳು

   (A) 12 ರಿಂದ 35 (B) 46 ರಿಂದ 49

   (C) 57 ರಿಂದ 66 (D) 77 ರಿಂದ 89

4. ಕರ್ನಾಟಕದಲ್ಲಿ ಅಣುಸ್ಥಾವರ ವಿರೋಧಿ ಚಳವಳಿಯ ನಾಯಕತ್ವ ವಹಿಸಿದ್ದವರು

   (A) ಮೇಧಾಪಾಟ್ಕರ್ (B) ಶಿವರಾಮ ಕಾರಂತ

   (C) ಪ್ರೊ. ಎಂ.ಡಿ. ನಂಜುಂಡಸ್ವಾಮಿ (D) ಕುಸುಮಾ ಸೊರಬ



Downloaded from scoringtarget.com

5. 'ಪ್ಲೇಟೊ' ರವರ ಕೃತಿ

(A) ಡಿವಿಜನ್ ಆಫ್ ಲೇಬರ್ (B) ಪಾಲಿಟಿಕ್ಸ್

(C) ದಿ ರಿಪಬ್ಲಿಕ್ (D) ಫುಟ್ ಲುಜರ್ಸ್

6. ಉತ್ತರ ಖಂಡದ ರಾಷ್ಟ್ರೀಯ ಉದ್ಯಾನವನ

(A) ಕಾರ್ಬೆಟ್ (B) ಸರಿಕ್ಸ

(C) ಗಿರ್ (D) ಧುದವ

7. "ಆರ್ಥಿಕ ಅಭಿವೃದ್ಧಿಯು ಜನರ ಆರ್ಥಿಕ ಕಲ್ಯಾಣದ ಹೆಚ್ಚಳ"ವೆಂದು ಹೇಳಿದವರು

(A) ಪ್ರೊ. ಮೆಯರ್ ಮತ್ತು ಬಾಲ್ಡವಿನ್ (B) ಪ್ರೊ. ಕೋಲಿನ್ ಕ್ಲಾರ್ಕ್

(C) ಮಹಬೂಬ್ ಉಲ್ ಹಕ್ (D) ಅಮರ್ತ್ಯ ಸೇನ್

8. ಮಾರ್ಚ್ 15 ನೇ ತಾರೀಖು ಹೀಗೆ ಪ್ರಸಿದ್ಧಿಯಾಗಿದೆ

(A) ವಿಶ್ವ ಮಹಿಳಾ ದಿನ (B) ವಿಶ್ವ ಸಾಕ್ಷರತಾ ದಿನ

(C) ವಿಶ್ವ ಗ್ರಾಹಕ ದಿನ (D) ವಿಶ್ವ ಆರೋಗ್ಯ ದಿನ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದವರಾರು ?

10. ಮೂರನೇ ಆಂಗ್ಲೋ-ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಯಾಯಿತು ?



Downloaded from scoringtarget.com

11. ಭಾರತದ ವಿದೇಶಾಂಗ ನೀತಿಯ ಶಿಲ್ಪಿ ಎಂದು ಯಾರನ್ನು ಕರೆಯಲಾಗಿದೆ ?

12. ಚಿಪ್ಕೋ ಚಳವಳಿಯು ಯಶಸ್ವಿ ಪರಿಸರ ಚಳವಳಿಯಾಗಿದೆ. ಹೇಗೆ ?

13. ಹಿಮಾಚಲದ ಯಾವುದಾದರೂ ಎರಡು ಗಿರಿಧಾಮಗಳನ್ನು ಹೆಸರಿಸಿ.

14. ಕೊಲ್ಕತ ಬಂದರಿನಲ್ಲಿ ಹೂಳು ತೆಗೆಯುವ ಕಾರ್ಯ ಅವಶ್ಯ. ಏಕೆ ?

15. ವಿಕೇಂದ್ರೀಕರಣದಿಂದಾಗುವ ಲಾಭವನ್ನು ತಿಳಿಸಿ.

16. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾರು ನೀಡುತ್ತಾರೆ ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ : 8 × 2 = 16**

17. ಹಲಗಲಿ ಬೇಡರು ಬ್ರಿಟಿಷರ ವಿರುದ್ಧ ಹೇಗೆ ದಂಗೆ ಎದ್ದರು ?

18. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮೋಚನೆಗೊಳಿಸಲಾಯಿತು ?

19. ಭಾರತದ ವಿದೇಶಾಂಗ ನೀತಿಯ ಮೇಲೆ ಪ್ರಭಾವಬೀರಿದ ಅಂಶಗಳಾವುವು ?

**ಅಥವಾ**

ಜಾಗತಿಕ ಮಟ್ಟದಲ್ಲಿ ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕಲು ಭಾರತವು ಹೇಗೆ ಪ್ರಯತ್ನಿಸುತ್ತಿದೆ ?



Downloaded from scoringtarget.com

20. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ಬರೆಯಿರಿ.

**ಅಥವಾ**

ದೊಂಬಿ ಅಥವಾ ಗಲಭೆಗಳನ್ನು ಹೇಗೆ ನಿಯಂತ್ರಿಸಬಹುದು ?

21. ಅಕ್ಟೋಬರ್ ತಿಂಗಳಿನ ಆರಂಭದಲ್ಲಿ ಮಾನ್ಸೂನ್ ಮಾರುತಗಳು ಹಿಂದಿರುಗಲು ಕಾರಣವೇನು ?

22. ಸಮುದ್ರತೀರ ಸವೆತದ ಪರಿಣಾಮಗಳಾವುವು ?

23. ನಿರೀಕ್ಷಿತ ಜೀವಿತಾವಧಿಯನ್ನು ಹೇಗೆ ಲೆಕ್ಕ ಹಾಕುವರು ?

24. ಸ್ವಯಂ ಉದ್ಯೋಗಕ್ಕಾಗಿ ಹಣಕಾಸಿನ ಸಹಾಯ ಮಾಡುವ ಯಾವುದಾದರೂ ನಾಲ್ಕು ಸಂಸ್ಥೆಗಳನ್ನು ಹೆಸರಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ : 9 × 3 = 27**

25. ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲೆ ಹೇಗೆ ಪರಿಣಾಮ ಬೀರಿತು ?

26. ಆರ್ಯ ಸಮಾಜದ ಉದ್ದೇಶಗಳಾವುವು ?

**ಅಥವಾ**

ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.

27. 1857 ರ ದಂಗೆಯ ವಿಫಲತೆಗೆ ಕಾರಣಗಳಾವುವು ?



Downloaded from scoringtarget.com

28. ರಷ್ಯಾ ದೇಶದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

29. ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ತೆಗೆದುಕೊಂಡಿರುವ ಕಾನೂನು ಕ್ರಮಗಳನ್ನು ಬರೆಯಿರಿ.

30. 'ಮಣ್ಣಿನ ಸವೆತದಿಂದ ಕೃಷಿಯ ಇಳುವರಿ ಕಡಿಮೆಯಾಗುತ್ತದೆ' ಸಮರ್ಥಿಸಿ.

**ಅಥವಾ**

ರಸ್ತೆ ಸಾರಿಗೆಯ ಅನುಕೂಲತೆಗಳೇನು ?

31. ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

32. ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳಾವುವು ?

**ಅಥವಾ**

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಯ ಪಾತ್ರವೇನು ?

33 ಬ್ಯಾಂಕಿನ ಕಾರ್ಯಗಳನ್ನು ಬರೆಯಿರಿ.

**ಅಥವಾ**

ಯಶಸ್ವಿ ಉದ್ಯಮಗಾರನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.



Downloaded from scoringtarget.com

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ :** **4 × 4 = 16**

34. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವೇನು ?

35. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಸಾಧನೆಗಳನ್ನು ಬರೆಯಿರಿ.

***ಅಥವಾ***

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯವನ್ನು ವಿವರಿಸಿ.

36. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿ ?

37. ಭಾರತದಲ್ಲಿ ರೂಢಿಯಲ್ಲಿರುವ ಕೃಷಿ ವಿಧಾನಗಳನ್ನು ಹೆಸರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** **1 + 4 = 5**

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ನವ ಮಂಗಳೂರು

c) ಗೋದಾವರಿ ನದಿ

d) ಭಾಕ್ರ–ನಂಗಲ್ ಯೋಜನೆ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಪ್ರಮುಖ ಉದ್ದೇಶವೇನು ? **5**



Downloaded from scoringtarget.com